# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 896

ಸದಸ್ಯರ ಹೆಸರು : ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸಬೇಕಾದ ದಿನಾಂಕ : 11-03-2026

| | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದ ರಾಷ್ಟ್ರೀಯ ಹೆದ್ದಾರಿಗಳಲ್ಲಿ, ವಿಶೇಷವಾಗಿ ನೆಲಮಂಗಲದ ಜಿಂದಾಲ್ ಪ್ಲಾಂಟ್ ಬಳಿ ಮತ್ತು ಹೊಸಕೋಟೆಯ ಸ್ಯಾಟ್ ಲೈಟ್ ರಿಂಗ್ ರೋಡ್‌ಗಳಲ್ಲಿ (STRR) ಇತ್ತೀಚೆಗೆ ಸಂಭವಿಸಿದ ಭೀಕರ ಅಪಘಾತಗಳು ಸರ್ಕಾರದ ಗಮನಕ್ಕೆ ಬಂದಿದೆಯೇ: | ಹೌದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| ಆ) | ಈ ಅಪಘಾತಗಳಿಗೆ ಅತಿ ವೇಗವೇ (ಗಂಟೆಗೆ 150-160 ಕಿ.ಮೀ) ಪ್ರಮುಖ ಕಾರಣ ಎಂಬ ಪೊಲೀಸ್ ವರದಿಗಳ ಹಿನ್ನೆಲೆಯಲ್ಲಿ, ಹೆದ್ದಾರಿಗಳಲ್ಲಿ ವೇಗ ಮಿತಿಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಸರ್ಕಾರ ಕೈಗೊಂಡಿರುವ ತಾಂತ್ರಿಕ ಕ್ರಮಗಳೇನು: | ಹೆದ್ದಾರಿಗಳಲ್ಲಿ ವೇಗ ಮಿತಿಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿಗಳಿಗೆ ಸದರಿ ಅಪಘಾತಗಳ ಕುರಿತು ವಿವರವಾದ ವರದಿಯನ್ನು ಸಲ್ಲಿಸುವಂತೆ ನಿರ್ದೇಶನ ನೀಡಲಾಗಿದ್ದು, ಅಪಘಾತಗಳ ಮೂಲ ಕಾರಣಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಿಸುವ ಸಲುವಾಗಿ Save LIFE Foundation ಸಂಸ್ಥೆಗೆ ಫೋರೆನ್ಸಿಕ್ ಇನ್ವೆಸ್ಟಿಗೇಶನ್ (Forensic Investigation) ನಡೆಸುವಂತೆ ಸೂಚಿಸಲಾಗಿದೆ. ಅವರು ನೀಡುವ ವರದಿಗಳನ್ನಾಧರಿಸಿ ಅಗತ್ಯ ರಸ್ತೆ ಸುರಕ್ಷತಾ ಸುಧಾರಣಾ ಕ್ರಮಗಳನ್ನು ಕೈಗೊಳ್ಳಲಾಗುವುದು.<br><br>ಇದಲ್ಲದೆ ಅಧಿಸೂಚಿತ ಸಾರಿಗೆ ವಾಹನಗಳಿಗೆ ಕೇಂದ್ರ ಮೋಟಾರು ವಾಹನ ನಿಯಮಾವಳಿ 1989 ರ ನಿಯಮ 118 (1) ರಡಿ Speed Governor ಅಳವಡಿಕೆಯನ್ನು ಕಡ್ಡಾಯಗೊಳಿಸಿರುವುದರಿಂದ ವಾಹನಗಳು ಅತಿವೇಗವಾಗಿ ಸಂಚರಿಸುವುದನ್ನು ನಿಯಂತ್ರಿಸಲಾಗುತ್ತಿದೆ.<br><br>ಪೊಲೀಸ್ ಇಲಾಖೆಯಿಂದ, Intelligent Traffic Management System (ITMS) ವ್ಯವಸ್ಥೆಯ Automatic Number Plate Recognition (ANPR) ಕ್ಯಾಮರಾಗಳನ್ನು ಈ ಕೆಳಕಂಡ ಘಟಕಗಳಲ್ಲಿ ಅಳವಡಿಸಲಾಗಿರುತ್ತದೆ. ಸದರಿ ಕ್ಯಾಮರಾಗಳ ಮೂಲಕ ಅತೀ ವೇಗವಾಗಿ ವಾಹನ ಚಾಲನೆ ಮಾಡುವ ಚಾಲಕರುಗಳ ವಿರುದ್ಧ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ.<br>• ಬೆಂಗಳೂರು ನಗರ<br>• ಮೈಸೂರು ನಗರ<br>• ಹುಬ್ಬಳ್ಳಿ-ಧಾರವಾಡ ನಗರ<br>• ಬೆಳಗಾವಿ ನಗರ<br>• ಮಂಗಳೂರು ನಗರ |

| | ಪ್ರಶ್ನೆ | ಉತ್ತರ |
|---|---|---|
| | | • ಕಲಬುರಗಿ ನಗರ<br>• ತುಮಕೂರು ಜಿಲ್ಲೆ<br>• ದಾವಣಗೆರೆ ಜಿಲ್ಲೆ<br>• ಶಿವಮೊಗ್ಗ ಜಿಲ್ಲೆ<br>• ಬೆಂಗಳೂರು ಮೈಸೂರು ಆಕ್ಸಿಸ್ ಕಂಟ್ರೋಲ್ಡ್ ರಾಷ್ಟ್ರೀಯ ಹೆದ್ದಾರಿ (ಎನ್‌ಹೆಚ್-275) (ಬೆಂಗಳೂರು ದಕ್ಷಿಣ ಜಿಲ್ಲೆ ಮತ್ತು ಮಂಡ್ಯ ಜಿಲ್ಲೆ)<br>• ಮೈಸೂರು ಜಿಲ್ಲೆ<br>• ಬಾಗಲಕೋಟೆ ಜಿಲ್ಲೆ<br>• ಗದಗ ಜಿಲ್ಲೆ<br>• ಯಾದಗಿರಿ ಜಿಲ್ಲೆ<br><br>ಅತೀ ವೇಗವಾಗಿ ವಾಹನ ಚಾಲನೆ ಮಾಡಿ, ಉಂಟಾಗುವ ರಸ್ತೆ ಅಪಘಾತಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಸ್ಪೀಡ್ ರಡಾರ್ ಗನ್‌ಗಳನ್ನು ಎಲ್ಲಾ ಘಟಕಾಧಿಕಾರಿಗಳಿಗೆ ಹಂಚಿಕೆ ಮಾಡಲಾಗಿರುತ್ತದೆ. ಸದರಿ ಉಪಕರಣದ ಮೂಲಕ ಅತೀ ವೇಗವಾಗಿ ವಾಹನ ಚಾಲನೆ ಮಾಡುವ ಚಾಲಕರುಗಳ ವಿರುದ್ಧ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ.<br><br>ಅತೀ ವೇಗವಾಗಿ ವಾಹನ ಚಾಲನೆ ಮಾಡುವುದರಿಂದ ಉಂಟಾಗುವ ಅನಾಹುತಗಳ ಕುರಿತು ಸಾರ್ವಜನಿಕರಿಗೆ ಅಭಿಯಾನಗಳ ಮೂಲಕ ಹಾಗೂ ಸಾಮಾಜಿಕ ಜಾಲತಾಣಗಳ ಮೂಲಕ ಅರಿವು ಮೂಡಿಸುವ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ.<br><br>ಲೋಕೋಪಯೋಗಿ ಇಲಾಖೆಯಿಂದ ಹೆದ್ದಾರಿಗಳ ವ್ಯಾಪ್ತಿಯಲ್ಲಿ ಅಗತ್ಯ ಮುನ್ನೆಚ್ಚರಿಕೆ ಫಲಕಗಳು, ಸಂಚಾರ ಸೂಚನಾ ಫಲಕಗಳು ಮತು ರಸ್ತೆ ಗುರುತುಗಳನ್ನು, ವೇಗಮಿತಿ ಸೂಚನಾ ಫಲಕಗಳು ಮತ್ತು ವೇಗ ಮಿತಿ ರಸ್ತೆ ಗುರುತುಗಳನ್ನು ಸೂಕ್ತ ಸ್ಥಳಗಳಲ್ಲಿ ಅಳವಡಿಸಲಾಗಿದೆ. ಇದಲ್ಲದೆ, ಹೆಚ್ಚುವರಿಯಾಗಿ ಅಗತ್ಯವಿರುವ ಪ್ರದೇಶಗಳಲ್ಲಿ ಮೆಟಲ್ ಬೀಮ್ ಕ್ರ್ಯಾಶ್ - ಬ್ಯಾರಿಯರ್‌ಗಳನ್ನು ಅಳವಡಿಸಲಾಗಿದ್ದು, ರಾತ್ರಿ ವೇಳೆ ದೃಶ್ಯತೆ ಹೆಚ್ಚಿಸಲು ಮತ್ತು ಸುರಕ್ಷತೆ ಸುಧಾರಿಸಲು ಅವುಗಳಿಗೆ ರೆಟ್ರೋ-ರಿಫ್ಲೆಕ್ಟಿವ್ ಸ್ಟಿಕರ್‌ಗಳನ್ನು ಅಳವಡಿಸಲಾಗಿದೆ. |
| ಇ) | ಹೆದ್ದಾರಿಗಳಲ್ಲಿ ಅಳವಡಿಸಲಾಗಿರುವ ಸಿಸಿಟಿವಿ ಕ್ಯಾಮೆರಗಳು ಕೇವಲ ದಂಡ ವಿಧಿಸಲು ಸೀಮಿತವಾಗಿವೆಯೇ; ಅತಿ ವೇಗದ ಚಾಲನೆಯನ್ನು ತಡೆಗಟ್ಟಲು ಇವುಗಳನ್ನು ಹೇಗೆ ಮೆಲ್ದರ್ಜೆಗೇರಿಸಲಾಗುವುದು: | ಹೆದ್ದಾರಿಗಳಲ್ಲಿ ಅಳವಡಿಸಲಾಗಿರುವ AI ಆಧಾರಿತ ಕ್ಯಾಮರಾಗಳು ದಂಡ ವಿಧಿಸಲು ಮಾತ್ರವಲ್ಲದೆ ವಾಹನ ಸಂಚಾರ ಮೇಲ್ವಿಚಾರಣೆ ಮಾಡಲು ಮತ್ತು ಸಂಚಾರಿ ನಿಯಮ ಉಲ್ಲಂಘನೆ ಪ್ರಕರಣಗಳನ್ನು ಪತ್ತೆ ಹಚ್ಚಲು, Automatic Number Plate Recognition (ANPR), Red Light Violation deduction (RLVD), Ryder Based Over-Speeding Deduction ಗಳಿಗಾಗಿ ಮತ್ತು ಸದರಿ ಕ್ಯಾಮರಾಗಳ ಮೂಲಕ ಅತೀ ವೇಗದ ಚಾಲನೆ ಸಹಿತ ವಿವಿಧ ತರಹದ ಸಂಚಾರ ನಿಯಮ ಉಲ್ಲಂಘನೆಗಳನ್ನು ಸೆರೆಹಿಡಿಯಲು ಸಹ ಬಳಸಲಾಗುತ್ತಿದೆ. |
| ಈ) | ಪದೇ ಪದೇ ಅಪಘಾತಗಳು ಸಂಭವಿಸುವ 'ಬ್ಲಾಕ್ ಸ್ಪಾಟ್'ಗಳನ್ನು (Black Spots) ಗುರುತಿಸಿ, ಅಲ್ಲಿ ರಸ್ತೆ | ರಾಜ್ಯ ಹೆದ್ದಾರಿಗಳು, ಪ್ರಮುಖ ಜಿಲ್ಲಾ ರಸ್ತೆಗಳು ಹಾಗೂ ಇತರೆ ರಸ್ತೆಗಳಲ್ಲಿನ ಬ್ಲಾಕ್ ಸ್ಪಾಟ್ ಗಳನ್ನು ಗುರುತಿಸುವುದು ಮತ್ತು ಅವುಗಳನ್ನು ಸರಿಪಡಿಸಲು ಸರ್ಕಾರವು ಆದೇಶ ಸಂಖ್ಯೆ PWD 42 EAP 2017, ದಿನಾಂಕ:04.04.2017 ರನ್ವಯ ಮಾರ್ಗಸೂಚಿಗಳನ್ನು |

| | ಪ್ರಶ್ನೆ | ಉತ್ತರ |
|---|---|---|
| | ವಿನ್ಯಾಸದ ಲೋಪಗಳನ್ನು ಸರಿಪಡಿಸಲು ಹಾಗೂ ರಸ್ತೆ ವಿಭಜಕಗಳ (Divider) ಎತ್ತರವನ್ನು ಹೆಚ್ಚಿಸಲು ಸರ್ಕಾರವು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದೊಂದಿಗೆ (NHA) ಸಮನ್ವಯ ಸಾಧಿಸಿದೆಯೇ: | ನಿಗದಿಪಡಿಸಿದ್ದು, ಅವುಗಳನ್ವಯ ಬ್ಲಾಕ್ ಸ್ಪಾಟ್‌ಗಳನ್ನು ಸರಿಪಡಿಸಲಾಗುತ್ತಿದೆ.<br><br>ಸದರಿ ಮಾರ್ಗಸೂಚಿಗಳನ್ವಯ, ಪೊಲೀಸ್ ಇಲಾಖೆಯಿಂದ ಸ್ವೀಕೃತವಾಗುವ ಆಯಾ ವರ್ಷದ ಬ್ಲ್ಯಾಕ್ ಸ್ಪಾಟ್‌ಗಳ ವರದಿಯನ್ನು ಪಾಲುದಾರಿಕಾ ಇಲಾಖೆಗಳಾದ ಲೋಕೋಪಯೋಗಿ ಇಲಾಖೆ, ಬಿ.ಬಿ.ಎಂ.ಪಿ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಗಳ ಸಂಬಂಧಪಟ್ಟ ಮುಖ್ಯ ಕಾಮಗಾರಿ ಅಭಿಯಂತರರುಗಳಿಗೆ ಕಳುಹಿಸಿ, ತಕ್ಷಣ ಜಾರಿಗೆ ತರಬಹುದಾದ ಅಲ್ಪಾವಧಿ ಸುರಕ್ಷತಾ ಕ್ರಮಗಳಾಗಿ, ಎಚ್ಚರಿಕಾ ಸೂಚನಾ ಫಲಕಗಳ ಅಳವಡಿಕೆ, ರಸ್ತೆ ಮಾರ್ಕಿಂಗ್‌ಗಳು, ವೇಗ ನಿಯಂತ್ರಣ ಕ್ರಮಗಳು, ವೈಜ್ಞಾನಿಕ ಸ್ಪೀಡ್ ಬ್ರೇಕರ್‌ಗಳ ನಿರ್ಮಾಣ ಹಾಗೂ ರಸ್ತೆ ದುರಸ್ತಿ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ ಮತ್ತು ದೀರ್ಘಾವಧಿ ಶಾಶ್ವತ ಪರಿಹಾರ ಕ್ರಮಗಳಾಗಿ ರಸ್ತೆ ಸುಧಾರಣೆ, ಜಂಕ್ಷನ್ ಅಭಿವೃದ್ಧಿ ಹಾಗೂ ಇತರೆ ಇಂಜಿನಿಯರಿಂಗ್ ಕ್ರಮಗಳನ್ನು ಅನುಷ್ಠಾನಗೊಳಿಸಲು ಎಲ್ಲಾ ಪಾಲುದಾರಿಕಾ ಇಲಾಖೆಗಳ ಸಮನ್ವಯದೊಂದಿಗೆ ಲೋಕೋಪಯೋಗಿ ಇಲಾಖೆಯಿಂದ ಸೂಕ್ತವಾದ ಅಲ್ಪಾವಧಿ ಮತ್ತು ದೀರ್ಘಾವಧಿಯ ಪರಿಹಾರ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. |
| ಉ) | ರಾತ್ರಿ ವೇಳೆಯ ಅಪಘಾತಗಳನ್ನು ತಡೆಯಲು ಹೆದ್ದಾರಿಗಳಿಗೆ ಹೆಚ್ಚಿನ ಬೆಳಕಿನ ವ್ಯವಸ್ಥೆ ಮತ್ತು ಹೆದ್ದಾರಿ ಗಸ್ತು (Highway Patrol) ಪಡೆಯನ್ನು ಬಲಪಡಿಸಲು ಸರ್ಕಾರ ಹಾಕಿಕೊಂಡಿರುವ ಯೋಜನೆಗಳೇನು? | ಪೊಲೀಸ್ ಇಲಾಖೆಯಿಂದ 2022-23 ನೇ ಸಾಲಿನಲ್ಲಿ ಹೆದ್ದಾರಿ ಗಸ್ತು ಕರ್ತವ್ಯಕ್ಕಾಗಿ ಒಟ್ಟು 250 ಸಂಖ್ಯೆಯ ಹೆದ್ದಾರಿ ಗಸ್ತು ವಾಹನಗಳನ್ನು ಖರೀದಿಸಿ ಎಲ್ಲಾ ಘಟಕಗಳಿಗೆ (ಬೆಂಗಳೂರು ನಗರ ಹೊರತುಪಡಿಸಿ) ಹಂಚಿಕೆ ಮಾಡಲಾಗಿರುತ್ತದೆ.<br><br>ಲೋಕೋಪಯೋಗಿ ಇಲಾಖೆಯಿಂದ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ನೀಡಿರುವ ವರದಿಯಂತೆ ರಾತ್ರಿ ವೇಳೆ ರಸ್ತೆ ಸುರಕ್ಷತೆಯನ್ನು ಹೆಚ್ಚಿಸುವ ಉದ್ದೇಶದಿಂದ ಕೇಂದ್ರ ಸರ್ಕಾರದ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯವು ಕಾಲಕಾಲಕ್ಕೆ ಹೊರಡಿಸುವ ಮಾರ್ಗಸೂಚಿಗಳ ಅನುಸಾರ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಘಟನಾ ನಿರ್ವಹಣಾ ವ್ಯವಸ್ಥೆ (IMS), ಅಪಘಾತ ಪೀಡಿತ ಬ್ಲಾಕ್ ಸ್ಪಾಟ್‌ಗಳ ತಿದ್ದುಪಡಿ, ಪ್ರಮುಖ ಪ್ರದೇಶಗಳಲ್ಲಿ LED & High Mast Lights ಗಳ ಅಳವಡಿಕೆ ಮತ್ತು 24X7 ಹೆದ್ದಾರಿ ಗಸ್ತು ವಾಹನಗಳ ನಿಯೋಜನೆಯನ್ನು ಜಾರಿಗೆ ತರಲಾಗಿದೆ. |

**ಟಿಡಿ 18 ಟಿಡಿಕ್ಯೂ 2026**

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು.